ಸಿ.ಸಿ .ನಂ. 110/2023 ಪಿಡಬ್ಲೂಃ 1

ದಿನಾಂಕಃ 15-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

6. ನಮ್ಮ ಮನೆಯ ಹತ್ತಿರ ನಾಗವೇಣಿ ಪಾಂಡುರಂಗ ನಾಯ್ಕ ಇವರ ಮನೆ ಇದೆ ಎಂದರೆ ಗೊತ್ತಿಲ್ಲ . ದೇವರಹಕ್ಕಲದಲ್ಲಿ ನಾನು ಸುಮಾರು 30 ವರ್ಷಗಳಿಂದ ವಾಸವಾಗಿದ್ದೇನೆ. ಮಂಜುಳಾ ನಾಯ್ಕರವರು ಕೂಡ ದೇವರಹಕ್ಕಲದವರು ಎಂದರೆ ಗೊತ್ತಿಲ್ಲ. ಕೋರ್ಟಿಗೆ ಬಂದಾಗ ನಾಗವೇಣಿ ಮತ್ತು ಮಂಜುಳಾರವರ ಪರಿಚಯ ಆಗಿದೆ . ಅಂಕೋಲಾ ಪೋಲಿಸ್ ಠಾಣೆಗೆ ಪೋಲಿಸರು ನನ್ನನ್ನು ಕರೆಸಿದ್ದರು ಎಂದರೆ ಸರಿ . ಅಲ್ಲಿ ನಾಗವೇಣಿ ಮತ್ತು ಮಂಜುಳಾ ಬಂದಿದ್ದರು ಎಂದರೆ ಸರಿಯಲ್ಲ . ಈ ಪ್ರಕರಣದ ಆರೋಪಿ ಮೇಧಾ ಅಂಕೋಲಾ ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ಧ ಏನು ದೂರನ್ನು ಕೊಟ್ಟಿದ್ದರು ತಿಳಿದುಕೊಂಡಿದ್ದೇನೆ . ನನ್ನನ್ನು ಮಂಜುಳಾ ಹಾಗೂ ನಾಗವೇಣಿ ಮೂವರನ್ನು ಸೇರಿಸಿ ಆ ದೂರನ್ನು ಕೊಟ್ಟಿದ್ದರು ಎಂದರೆ ನೆನಪಿಲ್ಲ. ಕಂಪ್ಲೆಂಟ್ ಕಾಪಿ ನನ್ನ ಬಳಿ ಇಲ್ಲ . ನನ್ನನ್ನು ಠಾಣೆಗೆ ಕರೆದಾಗ ನಾನು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದೆ ಎಂದರೆ ಸರಿ . ನಾನು ಮುಚ್ಚಳಿಕೆ ಬರೆದುಕೊಟ್ಟ ದಿನವೇ ನಾಗವೇಣಿ ಮತ್ತು ಮಂಜುಳಾ ಕೂಡ ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದರು ಎಂದರೆ ಗೊತ್ತಿಲ್ಲ.

7. ಮನೆ ರಿಪೇರಿಗೆ ಎಂದು ಸಾಲ ಪಡೆದುಕೊಂಡ ಇಸ್ವಿ ಗೊತ್ತಿಲ್ಲ. ಮನೆ ರಿಪೇರಿ 5 ವರ್ಷದ ಹಿಂದೆ ಮಾಡಿರುತ್ತಾರೆ . ನನಗೆ ಎಷ್ಟು ಅಗತ್ಯವಿದೆ ಅಷ್ಟು ಸಾಲವನ್ನು ಮಾಡುತ್ತಾ ಹೋಗಿದ್ದೇನೆ ಎಂದರೆ ಸರಿ . ನಮ್ಮ ಮನೆ ಹಂಚಿನ ಮನೆ . ನಮ್ಮದು ಎಪಿಎಲ್ ರೇಶನ್ ಕಾರ್ಡ ಇದೆ . ಈ ಸಾಲದಲ್ಲಿ ನನ್ನ ಮನೆಯವರ ದುಡಿಮೆಯ ಹಣವನ್ನು ಕೊಟ್ಟಿಲ್ಲ . ಸಾಮಾನ್ಯವಾಗಿ ಸಾಲ ಮಾಡುವವರು ಅವರ ಕೈಯಲ್ಲಿ ಹಣ ಇಲ್ಲದಿದ್ದಾಗ ಮಾತ್ರ ಸಾಲ ಮಾಡುತ್ತಾರೆ ಎಂದರೆ ಸರಿ . ಆ ಸಮಯದಲ್ಲಿ ನಮ್ಮ ಕುಟುಂಬದ ವಾರ್ಷಿಕ ಉತ್ಪನ್ನ ಎಷ್ಟಿತ್ತು ನೆನಪಿಲ್ಲ. ನಾವು ಬಿಪಿಎಲ್ ಕಾರ್ಡ ಪಡೆಯುವ ಪ್ರಯತ್ನ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನ್ನ ಮನೆಯವರು ನಿವೃತ್ತಿ ಹೊಂದಿದ ನಂತರ ನಾವು ಬಿಪಿಎಲ್ ಕಾರ್ಡ ಮಾಡುವ ಪ್ರಮೇಯ ಬಂದಿಲ್ಲ. ಬ್ಯಾಂಕ ವ್ಯವಹಾರ ಹಾಗೂ ಬ್ಯಾಂಕ ವ್ಯವಹಾರ ಮಾಡುವಾಗ ಯಾವ ಯಾವ ದಾಖಲಾತಿಗಳನ್ನು ಪಡೆಯುತ್ತಾರೆ ನನಗೆ ಗೊತ್ತಿಲ್ಲ. ಸಾಲದ ವ್ಯವಹಾರವನ್ನು ನಾನೇ ಖುದ್ದಾಗಿ ಮಾಡಿರುತ್ತೇನೆ. ಸಾಕ್ಷಿ ಸ್ವತಃ ನನ್ನ ಬಂಗಾರವನ್ನು ಇಟ್ಟು ಹಣ ಮನೆ ರಿಪೇರಿಗಾಗಿ ಹಣ ತಂದು ಇಟ್ಟಿದ್ದೆ . ನಾನು ಮನೆ ರಿಪೇರಿಗಾಗಿ ಮತ್ತು ಉದ್ಯೋಗಕ್ಕಾಗಿ ಸಾಲವನ್ನು ಮಾಡಿದ್ದೆ. ನಾನು ಟೆಲರಿಂಗ್ ಉದ್ಯೋಗ ಮಾಡಿಕೊಂಡಿದ್ದೇನೆ. ಮಸೀನ್ ತಕೊಂಡು ತುಂಬಾ ವರ್ಷವಾಯಿತು. ಮೊದಲೇ ತೆಗೆದುಕೊಂಡಿದ್ದೆ . ನಾನು ಲಕ್ಷಾನುಗಟ್ಟಲೆ ಹಣವನ್ನು ಮನೆಯಲ್ಲಿ ಇಟ್ಟುಕೊಳ್ಳುವಂತಹ ಸ್ಥಿತಿವಂತಳು ಅಲ್ಲ ಎಂದರೆ ಸರಿ . ನನ್ನದು ಟೆಲರಿಂಗ್ ಅಂಗಡಿ ಇಲ್ಲ. ಅಕ್ಕಪಕ್ಕದವರು ಯಾರಾದರೆ ಕೊಟ್ಟರೆ ಮಾತ್ರ ಟೆಲರಿಂಗ್ ಕೆಲಸ ಮಾಡುತ್ತೇನೆ . ಅಕ್ಕಪಕ್ಕದವರು ಸಾಮಾನ್ಯವಾಗಿ ಟೆಲರಿಂಗ್ ಕೆಲಸ ಮಾಡಿಸಿಕೊಂಡಾಗ ಕಡಿಮೆ ಹಣವನ್ನೇ ಕೊಟ್ಟು ಹೋಗುತ್ತಾರೆ ಎಂದರೆ ಸರಿ . ಟೆಲರಿಂಗ್ ವೃತ್ತಿಯನ್ನು ಹೊರತು ಪಡಿಸಿ ನನಗೆ ಬೇರೆ ಯಾವುದೇ ಉತ್ಪನ್ನ ಇಲ್ಲ ಎಂದರೆ ಸರಿ . 2019 ರಿಂದ 2021ರ ವರೆಗೆ ನನಗೆ ಹಾಗೂ ನನ್ನ ಮನೆಯವರಿಗೆ ಎಷ್ಟು ಸಾಲ ಇತ್ತು ಹೇಳಲು ಆಗುವುದಿಲ್ಲ. 2021 ರಿಂದ 2023ರವರೆಗೆ ನನಗೆ ಹಾಗೂ ನನ್ನ ಮನೆಯವರಿಗೆ ಎಷ್ಟು ಸಾಲ ಇತ್ತು ನೆನಪಿಲ್ಲ, ಆದರೆ 5 ಲಕ್ಷ ರೂಪಾಯಿ ಮನೆಯಲ್ಲಿ ಇಟ್ಟುಕೊಂಡಿದ್ದೆ . ಯಾವುದೇ ಒಂದು ಸಾಲವನ್ನು ಮಾಡಿದಾಗ ಅದಕ್ಕೆ ಬಡ್ಡಿ ಬೆಳೆಯುತ್ತಾರ ಇರುತ್ತದೆ ಎಂಬ ಸಾಮಾನ್ಯ ಜ್ಞಾನ ನನಗೆ ಇದೆ ಎಂದರೆ ಸಾಕ್ಷಿ ನಾನು ನನ್ನ ಬಂಗಾರವನ್ನು ಇಟ್ಟಾಗ ಅದಕ್ಕೆ ಬಡ್ಡಿ ಕಟ್ಟಬೇಕೆಂಬ ಅರಿವು ನನಗೆ ಇದೆ ಎಂದು ನುಡಿದಿರುತ್ತಾರೆ . ನಾನು ಸುಮ್ಮ ಸುಮ್ಮನೆ ಸಾಲ ಮಾಡುವ ಹವ್ಯಾಸ ಹೊಂದಿದವಳು ಅಲ್ಲ ಎಂದರೆ ಸರಿ . ಅಗತ್ಯತೆಗೆ ಮಾತ್ರ ಸಾಲವನ್ನು ಮಾಡಿ ಬಳಸಿಕೊಳ್ಳುವ ಸ್ವಭಾವದವಳು ಎಂದರೆ ಸರಿ . 5 ಲಕ್ಷ ರೂಪಾಯಿ ಮೊತ್ತವನ್ನು ಮನೆಯಲ್ಲಿ ಇಟ್ಟುಕೊಂಡ ಇಸ್ವಿ ನೆನಪಿಲ್ಲ ಆದರೆ 2020ರ ಕೊನೆಯಲ್ಲಿ ಅಥವಾ 2021ನೇ ಇಸ್ವಿಯಲ್ಲಿ ಇಟ್ಟುಕೊಂಡಿದ್ದೆನು. ಮೊದಲ ಬಾರಿಗೆ ನಾನು ಸಾಲ ಮಾಡಿರುವುದು ಯಾವ ತಿಂಗಳಲ್ಲಿ ಮಾಡಿದ್ದು ನೆನಪಿಲ್ಲ.

8. ಫಿರಾದಿನಲ್ಲಿರುವ ಅಂಶಗಳನ್ನು ನಮ್ಮ ವಕೀಲರಿಗೆ ನಾನೇ ಹೇಳಿರುತ್ತೇನೆ . ಮೊದಲ ಬಾರಿಗೆ ಯಾವ ಕಾರಣಕ್ಕೆ ಸಾಲ ಮಾಡಿ ಇಟ್ಟುಕೊಂಡಿದ್ದೆ ದಿನಾಂಕ ಹೇಳಲು ಬರುವುದಿಲ್ಲ . 5 ಲಕ್ಷ ರೂಪಾಯಿಗಳನ್ನು ಎಷ್ಟು ದಿನ ಮನೆಯಲ್ಲಿ ಇಟ್ಟುಕೊಂಡಿದ್ದೆ ನೆನಪಿಲ್ಲ . ಮನೆಯ ಗೋಡೆ ಒಡೆದಿತ್ತು , ಹಂಚು ಹೋಗಿತ್ತು ಆ ರಿಪೇರಿ ಕೆಲಸ ಇತ್ತು . ಮಳೆಗಾಲದಲ್ಲಿ ಅನಾನುಕೂಲ ಆಗುತ್ತದೆ ಕಾರಣ ರಿಪೇರಿ ಮಾಡಬೇಕೆಂದು ಬಂಗಾರ ಇಟ್ಟು ಸಾಲವನ್ನು ಮಾಡಿದ್ದೆ . ಸಾಕ್ಷಿ ಸ್ವತಃ ಬಂಗಾರ ಇಟ್ಟ ಸಾಲ ಅಲ್ಲದೇ ಸಿಂಡಿಕೇಟ್ ಬ್ಯಾಂಕನಲ್ಲಿರುವ ಒಂದುವರೆ ಲಕ್ಷ ರೂಪಾಯಿ ಕೂಡ ಮನೆಯಲ್ಲಿ ತಂದು ಇಟ್ಟುಕೊಂಡಿದ್ದೆ ಎಂದು ನುಡಿದಿರುತ್ತಾರೆ . ಯಾವ ಇಸ್ವಿಯಲ್ಲಿ ಸಿಂಡಿಕೇಟ್ ಬ್ಯಾಂಕಿನಿಂದ ಹಣವನ್ನು ತಂದು ಇಟ್ಟಿದ್ದೆ ನೆನಪಿಲ್ಲ. ಬಂಗಾರವನ್ನು ಅಡವಿಟ್ಟ ಎಷ್ಟು ದಿನಗಳ ಮೊದಲು ಸಿಂಡಿಕೇಟ್ ಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡು ಬಂದಿದ್ದೆ ದಾಖಲಾತಿ ನೋಡಿ ಹೇಳಬೇಕು . ಸಿಂಡಿಕೇಟ್ ಬ್ಯಾಂಕಿನ ಪಾಸ್ ಬುಕ್ ನನ್ನ ಬಳಿ ಇದೆ . ಸಿಂಡಿಕೇಟ್ ಬ್ಯಾಂಕಿನಲ್ಲಿ ನನ್ನ ಉಳಿತಾಯ ಖಾತೆ ಇದೆ . ಸಿಂಡಿಕೇಟ್ ಬ್ಯಾಂಕಿನಲ್ಲಿ ನಾನು ಸಾಲ ಮಾಡಿಲ್ಲ. ನನ್ನದೇ ಹಣ ಇತ್ತು. ನನ್ನ ಅಮ್ಮನ ಮನೆಯ ಕೊಟ್ಟಿರುವ ಆಸ್ತಿಯ ಹಣ ಇತ್ತು . ಮನೆಯನ್ನು ವ್ಯವಸ್ಥಿತವಾಗಿ ರಿಪೇರಿ ಮಾಡಬೇಕೆಂಬ ಉದ್ದೇಶದಿಂದ ಸಾಲವನ್ನು ಮಾಡಿದ್ದೆ . ಸಿಂಡಿಕೇಟ್ ಬ್ಯಾಂಕ ಅಕೌಂಟನಲ್ಲಿರುವ ಹಣವನ್ನು ಅಗತ್ಯವಿದ್ದಾಗ ಮಾತ್ರ ತೆಗೆಯುತ್ತೇನೆ , ತಂದು ಮನೆಯಲ್ಲಿ ಇಟ್ಟುಕೊಳ್ಳುವ ಅಭ್ಯಾಸವಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ರಿಪೇರಿಗೆ ಈಗ ಬರುತ್ತೇನೆ, ಆಗ ಬರುತ್ತೇನೆ ಎಂದು ಹೇಳಿದ್ದರು ಯಾವಾಗ ಬರುತ್ತಾರೆ ಗೊತ್ತಿಲ್ಲ ಕಾರಣ ಹಣ ತಂದು ಇಟ್ಟಿದ್ದೆ . ಮನೆ ರಿಪೇರಿಗೆ ಬರುವವರಿಗೆ ಮುಂಗಡ ಹಣ ಕೊಡುವುದಿಲ್ಲ ರಿಪೇರಿ ಮಾಡಿದ ನಂತರ ಹಣವನ್ನು ಕೊಡಬೇಕಾಗುತ್ತದೆ ಎಂದರೆ ಸರಿ . ಸಿಂಡಿಕೇಟ್ ಬ್ಯಾಂಕ ನಮ್ಮ ಮನೆಯಿಂದ ಅರ್ಧ ಕಿಲೋ ಮೀಟರ ಒಳಗಡೆ ಇರುವಂತಹ ಬ್ಯಾಂಕ ಎಂದರೆ ಸರಿ . ಕಾರಣ ನಾನು ಯಾವಾಗ ಬೇಕಾದರು ಬ್ಯಾಂಕಿಗೆ ಹೋಗಿ ಹಣವನ್ನು ತೆಗೆದುಕೊಂಡು ಬರಬಹುದು ಎಂದರೆ ಸರಿ . ಮನೆ ವ್ಯವಸ್ಥಿತವಾಗಿ ಇರಲಿಲ್ಲ, ಕಾರಣ ಅಂತಹ ಮನೆಯಲ್ಲಿ ಯಾವುದೇ ವ್ಯಕ್ತಿ 5 ಲಕ್ಷ

ರೂಪಾಯಿಯನ್ನು ತಂದು ಇಡುವಂತಹ ಧೈರ್ಯ ಮಾಡುವುದಿಲ್ಲ ಎಂದರೆ ಸಾಕ್ಷಿ ಮನೆ ರಿಪೇರಿಗೆ ಬರುತ್ತಾರೆ ಅವರಿಗೆ ಹಣ ಕೊಡಬೇಕು, ಆ ವ್ಯವಸ್ಥೆ ನಾನು ಮಾಡಬೇಕು ಎಂದು ನುಡಿದಿರುತ್ತಾರೆ .

9. ಸಾಲವನ್ನು ಕೇಳಿದ ದಿನವೇ ಹಣವನ್ನು ಕೊಟ್ಟಿರುತ್ತೇನೆ . ಮನೆ ರಿಪೇರಿಗೆ ಎಂದು ತಂದಿಟ್ಟ ಹಣವನ್ನು ಕೊಡುವಂತಹ ಸಂದರ್ಭದಲ್ಲಿ ನಾನು ನಮ್ಮ ಮನೆಯವರಿಗೆ ಹೇಳಿಲ್ಲ . ನಾನು ಕೋರ್ಟಿಗೆ ಹಾಕಿದಾಗ ವಿಷಯ ಮನೆಯವರಿಗೆ ಗೊತ್ತಾಗಿದೆ . ಮನೆ ರಿಪೇರಿ ಮಾಡುವುದು ಮನೆಯವರೆಲ್ಲಾ ಸೇರಿ ನಿರ್ಣಯ ಮಾಡುವುದು ಎಂದರೆ ಸರಿ . ಪ್ರಕರಣ ದಾಖಲು ಮಾಡಿದ ಮೇಲೆ ನನ್ನ ಮನೆಯವರಿಗೆ ಹೇಳಿದೆ . 5 ಲಕ್ಷದಷ್ಟು ದೊಡ್ಡ ಮೊತ್ತದ ಹಣ ನಮ್ಮ ಪ್ರಕಾರ ನಮ್ಮ ಕುಟುಂಬಕ್ಕೆ ದೊಡ್ಡ ಮೊತ್ತದ ಹಣ ಎಂದರೆ ಸರಿ . 5 ಲಕ್ಷದ ಹಣ ಇತ್ತು , ಸಣ್ಣ ಪುಟ್ಟ ಚಿಲ್ಲರೆ ಹಣ ಇತ್ತು ಅದು ಹೇಳಲು ಬರುವುದಿಲ್ಲ . ಆರೋಪಿ ಹಣವನ್ನು ಮೊದಲನೇ ಬಾರಿಗೆ ನಮ್ಮ ಮನೆಯಲ್ಲೇ ಕೇಳಿದ್ದರು . ಆರೋಪಿ ನಮ್ಮ ಮನೆಗೆ ಬಂದರು , ನಮ್ಮ ಪರಿಸ್ಥಿತಿ ಹೀಗಿದೆ , ಹೆಗಡೆ ಗ್ರಾಮದಲ್ಲಿ ಜಾಗವನ್ನು ತೆಗೆದುಕೊಳ್ಳಬೇಕು , ಸ್ವಲ್ಪ ಹಣ ಕಡಿಮೆ ಬಿದ್ದಿದೆ ಎಂದು ಹೇಳಿದರು . ಕೇಳಿದ ತಕ್ಷಣ ಅದೇ ದಿನ ಹಣವನ್ನು ನಮ್ಮ ಮನೆಯಿಂದ ತೆಗೆದುಕೊಂಡು ಹೋದರು. ದಿಃ 16-01-2021ರಂದು ಆರೋಪಿ ಹಣವನ್ನು ತೆಗೆದುಕೊಂಡು ಹೋಗಿದ್ದರು. ದಿಃ 22-03-2021ಕ್ಕೆ ನನಗೆ ಚೆಕ್ ನ್ನು ಕೊಟ್ಟರು . ಚೆಕ್ ನಲ್ಲಿ ಬರವಣಿಗೆ ಮಾಡಿಯೇ ಚೆಕ್ ನ್ನು ಕೊಟ್ಟಿದ್ದರು. ಚೆಕ್ ನ ಮೇಲಿರುವ ಬರವಣಿಗೆ ಅವರೇ ಬರೆದುಕೊಟ್ಟಿದ್ದಾರೆ . ಚೆಕ್ ನಲ್ಲಿರುವ ಬರವಣಿಗೆಯನ್ನು ಒಂದೇ ಬಾರಿ ಒಂದೇ ಪೆನ್ನಿನಲ್ಲಿ ಮಾಡಿರುತ್ತಾರೆ . ಚೆಕ್ ನ ಮೇಲಿರುವ ದಿನಾಂಕ ಬರೆದಿರುವ ಶಾಹಿಗೂ ಇನ್ನಿತರ ಬರವಣಿಗೆ ಬರದಿರುವ ಶಾಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಚೆಕ್ ನ ಮೇಲಿರುವ ಯಾವುದೇ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ . ಸದರಿ ಬರವಣಿಗೆ ಆರೋಪಿಯದ್ದಲ್ಲ ಎಂದು ಪುರಾವೆ ಮಾಡಲು ಹ್ಯಾಂಡರೈಟಿಂಗ್ ಎಕ್ಸಪರ್ಟಗೆ ಕಳುಹಿಸಲು ಯಾವುದೇ ತೊಂದರೆ ಇಲ್ಲ. ಪೆನ್ನಿನ ಇಂಕೂ ಕೂಡ ಬೇರೆ ಬೇರೆ ಎಂದು ಪುರಾವೆ ಮಾಡಲು ಹ್ಯಾಂಡರೈಟಿಂಗ್

ಎಕ್ಸಪರ್ಟಗೆ ಕಳುಹಿಸಲು ನನ್ನ ಯಾವುದೇ ತೊಂದರೆ ಇಲ್ಲ . ಆ ಕ್ಷಣ ಆರೋಪಿ ಚೆಕ್ ನ್ನು ತಂದುಕೊಟ್ಟಿದ್ದರಿಂದ ಬರವಣಿಗೆ ಅವರದೇ ಎಂದು ಹೇಳುತ್ತಿದ್ದೇನೆ . ಚೆಕ್ ನ ಮೇಲಿರುವ ಬರವಣಿಗೆ ಆರೋಪಿ ಮಾಡಿದ್ದು ಅಲ್ಲ , ನಾನೇ ಅದನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು .

10. ನಾನು ವಕೀಲರ ಮೂಲಕ ನೀಡಿರುವ ನೋಟಿಸು ಮೇಧಾ ನಾಗರಾಜ ನಾಯ್ಕ ರವರಿಗೆ ತಲುಪಿರುತ್ತದೆ . ಮೇಧಾ ನಾಗರಾಜ ನಾಯ್ಕರವರ ಯಜಮಾನರು ಹೊರ ದೇಶದಲ್ಲಿ ಕೆಲಸಕ್ಕಿದ್ದಾರೆ ಎಂದರೆ ಗೊತ್ತಿಲ್ಲ. ಮೇಧಾರರು ಸಾಕಷ್ಟು ಸ್ಥಿತಿವಂತರು , ಸಾಕಷ್ಟು ಪ್ರೊಪರ್ಟಿ ಖರೀದಿ ಮಾಡಿದವರು ಎಂದರೆ ಗೊತ್ತಿಲ್ಲ. ನನ್ನ ಬಳಿ ನೆಕ್ಲೇಸ್ , ಬಳೆ , ಉಂಗುರ , ಚೈನು ಇಂತಹ ಬಂಗಾರದ ಆಭರಣಗಳು ಇವೆ . ಕಿವಿ ಓಲೆ , ಉಂಗುರ ದಿನಬಳಕೆಯ ಚಿನ್ನದ ವಸ್ತುಗಳು ಎಂದರೆ ಸರಿ . ಮಂಗಳಸೂತ್ರ ಕೂಡ ದಿನಬಳಕೆಗೆ ಬಳಸುವಂತಹದ್ದು ಎಂದರೆ ಸರಿ . ನಾನು 1,50,000/- ರೂಪಾಯಿ ಸಿಂಡಿಕೇಟ್ ಬ್ಯಾಂಕಿನಿಂದ ತೆಗೆದುಕೊಂಡು ಇಟ್ಟುಕೊಂಡಿದ್ದೆ.

11. ಆರೋಪಿಗೆ ನೋಟಿಸು ಹೋದ ನಂತರ ನನಗೆ ಉತ್ತರ ಕೊಟ್ಟಿದ್ದರು ಹಾಗೂ ಪೋಲಿಸ್ ಠಾಣೆಯಲ್ಲಿ ಕಂಪ್ಲೆಂಟ್ ಕೂಡ ಕೊಟ್ಟಿದ್ದರು ಎಂದರೆ ಸರಿ . ಠಾಣೆಯಲ್ಲಿ ಏನು ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ನೆನಪಿಲ್ಲ. ನಾಗವೇಣಿ ಬಳಿ ಇರುವ ಚೆಕ್ ನ್ನು ಆಕೆ ತಾನು ದುರುಪಯೋಗ ಪಡಿಸಿಕೊಂಡಿದ್ದು ಅಲ್ಲದೇ ಮಂಜುಳಾ ಹಾಗೂ ಗೀತಾ ಇವರಿಗೆ ಚೆಕ್ ನ್ನು ಕೊಟ್ಟು ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಆ ಕಾರಣ ಈ ಮೂವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ದೂರನ್ನು ಕೊಟ್ಟಿದ್ದಳು ಎಂದರೆ ಸಾಕ್ಷಿ ನನ್ನನ್ನು ಠಾಣೆಗೆ ಕರೆದಿದ್ದರು , ನಾನು ಹೋಗಿದ್ದೆ , ಅದಕ್ಕೂ ನನಗೂ ಸಂಬಂಧವಿಲ್ಲ ಹಾಗೆ ನನ್ನ ಸಿಗ್ನೇಚರ್ ನ್ನು ತೆಗೆದುಕೊಂಡಿದ್ದರು , ನಾನು ಮನೆಗೆ ಬಂದೆ . ನಾನು ಠಾಣೆಗೆ ಹೋದಾಗ ಆರೋಪಿ ಏನು ದೂರು ಕೊಟ್ಟಿದ್ದಾರೆ, ನನಗೆ ಓದಿ ಹೇಳಿದ್ದಾರೆ . ನಾಗವೇಣಿ ಅವರಿಗೆ ಕೊಟ್ಟ ಚೆಕ್ ನ್ನು ನಾವು ಮೂವರು ದುರುಪಯೋಗ ಪಡಿಸಿಕೊಂಡಿದ್ದೇವೆ ಎಂದು ಆರೋಪಿ ದೂರನ್ನು

ಕೊಟ್ಟಿದ್ದರು ಎಂದರೆ ಸರಿ . ನಾವು ಪ್ರಕರಣವನ್ನು ದಾಖಲಿಸುವುದಿಲ್ಲ , ಹಿಂತೆಗೆದುಕೊಳ್ಳುತ್ತೇವೆ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದೆ ಎಂದರೆ ನೆನಪಿಲ್ಲ . ಪೋಲಿಸರು ಕರೆಸಿದ್ದರು ನಾನು ಹೋಗಿದ್ದೆ , ಅದಕ್ಕೂ ನನಗೂ ಸಂಬಂಧವಿಲ್ಲ . ಅದರ ನಂತರ ನಾನು ಬಂದು ಇಲ್ಲಿ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ಪ್ರಕರಣ ಮುಂದುವರೆಸಿರುತ್ತೇನೆ ಎಂದು ನುಡಿದಿರುತ್ತಾರೆ . ನಾನು ಪೋಲಿಸ್ ಠಾಣೆಯಲ್ಲಿ ಬರೆದುಕೊಟ್ಟಂತೆ ನಡೆದುಕೊಳ್ಳದ ಕಾರಣ ಆರೋಪಿ ಮಾನ್ಯ ಎಸ್ ಪಿಯವರಲ್ಲಿ ದೂರನ್ನು ಕೊಟ್ಟಿರುತ್ತಾರೆ ಎಂದರೆ ನೆನಪಿಲ್ಲ . ನಾನು ಸುಮಾರು ಸಾರಿ ಅಂಕೋಲಾ ಪೋಲಿಸ್ ಠಾಣೆಗೆ ಇದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೋಗಿರುತ್ತೇನೆ ಎಂದರೆ ನೆನಪಿಲ್ಲ . ಎಸ್ ಪಿ ಯವರಲ್ಲಿ ಕಂಪ್ಲೆಂಟ್ ಕೊಟ್ಟ ನಂತರ ನಾವು ಮೂವರು ಕೇಸನ್ನು ಹಿಂಪಡೆಯುತ್ತೇವೆ ಎಂದು ಹೇಳಿದ್ದೆವು ಎಂದರೆ ಸರಿಯಲ್ಲ.

12. ದೇವರಹಕ್ಕಲದಲ್ಲಿ ನಾವು ಹೆಣ್ಣು ಮಕ್ಕಳು ಸೇರಿ ಚಿಪ್ ಫಂಡ್ ವ್ಯವಹಾರವನ್ನು ಮಾಡುತ್ತೇವೆ ಎಂದರೆ ಸರಿಯಲ್ಲ. ಚಿಪ್ ಫಂಡ್ ಮಾಡುವಾಗ ರಜಿಸ್ಟರ್ ನಲ್ಲಿ ಎಲ್ಲರ ಹೆಸರನ್ನು ಬರೆದು ಸಹಿಯನ್ನು ಪಡೆಯುತ್ತಾರೆ ಎಂದರೆ ಗೊತ್ತಿಲ್ಲ. ಚಿಪ್ ಫಂಡ್ ನಲ್ಲಿ ನಾನು , ಮಂಜುಳಾ, ನಾಗವೇಣಿ ಹಾಗೂ ಇನ್ನಿತರ 8 ಜನರು ಸೇರಿ ಚಿಪ್ ಫಂಡ್ ವ್ಯವಹಾರವನ್ನು ಮಾಡುತ್ತೇವೆ ಎಂದರೆ ಸರಿಯಲ್ಲ . ನಾವು ಮೂರು ಜನ ಸ್ನೇಹಿತಿಯರು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಚಿಪ್ ಫಂಡ್ ವ್ಯವಹಾರದ ಬಗ್ಗೆಯಾಗಲೀ ಆ ಇಬ್ಬರು ವ್ಯಕ್ತಿಗಳ ಬಗ್ಗೆಯಾಗಲೀ ಪ್ರಶ್ನೆ ಕೇಳುವ ಮೊದಲು ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮಂಜುಳಾರವರ ತಾಯಿಯ ಮನೆ ದೇವರಹಕ್ಕಲ ಎಂದರೆ ಇರಬಹುದು . ನಾಗೇಣಿ ಪಾಂಡುರಂಗ ನಾಯ್ಕು ಕೂಡ ದೇವರಹಕ್ಕಲದವರು ಎಂದರೆ ಗೊತ್ತಿಲ್ಲ . ನಾವೆಲ್ಲರೂ ಕೂಡ ದೇವರಹಕ್ಕಲದವರಿದ್ದು ಸುಮಾರು ವರ್ಷಗಳಿಂದ ಅಲ್ಲೇ ವಾಸವಾಗಿದ್ದರೂ ನಿಜ ಹೊರಬರುತ್ತದೆ ಎಂದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಗೆ ಸಾಲ ಕೊಟ್ಟಿದ್ದೇನೆ ಎಂದು ಹೇಳಲು ಯಾವುದೇ ಸಾಕ್ಷಿದಾರರು ಇಲ್ಲ ಎಂದರೆ ಸರಿ . ಅದೇ ರೀತಿ ಅವರು ನನಗೆ ಚೆಕ್ ಕೊಟ್ಟಿದ್ದಾರೆ ಎಂದು ಹೇಳಲು

ಯಾವುದೇ ಸಾಕ್ಷಿದಾರರು ಇಲ್ಲ ಎಂದರೆ ಸರಿ . ಚೆಕ್ ನ್ನು ನಮ್ಮ ಮನೆಯಲ್ಲಿ ಕೊಟ್ಟಿರುತ್ತಾರೆ . ನಾವು ಮನೆಯಲ್ಲಿ ನಾನು , ನಮ್ಮ ಮೈದುನ, ಮೈದುನನ ಹೆಂಡತಿ ಎಲ್ಲರೂ ಇರುತ್ತೇವೆ ಅವರೆಲ್ಲಾ ಕೆಲಸಕ್ಕೆ ಹೋಗುತ್ತಾರೆ . ನಮ್ಮ ಮನೆಯಲ್ಲಿ ನಾನು , ಆರೋಪಿಗೆ ಸಾಲ ಕೊಟ್ಟ ಬಗ್ಗೆಯಾಗಲೀ, ಆರೋಪಿ ನನಗೆ ಚೆಕ್ ಕೊಟ್ಟ ಬಗ್ಗೆಯಾಗಲೀ ಯಾರಿಗೂ ಗೊತ್ತಿಲ್ಲ.

13. ಮೇಧಾರವರ ಮದುವೆಯಾಗಿ ಸುಮಾರು 25 ವರ್ಷ ಆಗಿದೆ ಎಂದರೆ ಇರಬಹುದು . ಅವರ ವಿಳಾಸ ದೇವರಹಕ್ಕಲು . ಆರೋಪಿ ಯಾವತ್ತೂ ಕೂಡ ದೇವರಹಕ್ಕಲನಲ್ಲಿ ಬಂದು ಉಳಿದಿಲ್ಲ. ಅದು ಅವರ ವಿಳಾಸ ಅಲ್ಲ ಎಂದರೆ ಸಾಕ್ಷಿ ಅವರ ಗಂಡನ ಮನೆ ಅಂಕೋಲಾ, ತಾಯಿಯ ಮನೆ ದೇವರಹಕ್ಕಲ . ನಾನು ಹೇಳಿದಂತೆ 5 ಲಕ್ಷ ರೂಪಾಯಿ ಹಣವನ್ನು ಪಡೆದುಕೊಳ್ಳುವಂತಹ ಸಂದರ್ಭ ಆರೋಪಿಗೆ ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಾನು ಹೇಳಿದ ಸಂದರ್ಭದಲ್ಲಿ ಹೆಗಡೆಯಲ್ಲಿ ಯಾವುದೇ ಜಮೀನನ್ನು ಖರೀದಿ ಮಾಡಿಲ್ಲ ಎಂದರೆ ಆ ರೀತಿ ಹೇಳಿ ತೆಗೆದುಕೊಂಡು ಹೋಗಿದ್ದರು ಎಂದು ನುಡಿದಿರುತ್ತಾರೆ . ಆ ಸಮಯದಲ್ಲಿ ಅವರು ಖರೀದಿಸದೇ ಇರುವ ಕಾರಣ ಅವರು ನನ್ನ ಬಳಿ ಹಣವನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅಗತ್ಯತೆಯಗೋಸ್ಕರ ಆಯಾ ಸಂದರ್ಭದಲ್ಲಿ ಮಾಡಿದ ಸಾಲದ ಹಣದ ದಾಖಲಾತಿಯನ್ನು ಇಟ್ಟುಕೊಂಡು ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸುಳ್ಳು . ನನ್ನ ಸ್ನೇಹಿತೆ ನಾಗವೇಣಿ ಬಳಿ ಇರುವಂತಹ ಚೆಕ್ ನ್ನು ಪಡೆದುಕೊಂಡು ಈ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸುಳ್ಳು . ನಾನು ಹಾಜರು ಪಡಿಸಿದಂತಹ ದಾಖಲಾತಿಗಳಲ್ಲಿರುವ ಸಾಲದ ಹಣವನ್ನು ನನ್ನ ಅಗತ್ಯತೆಯಗೋಸ್ಕರ ಸಾಲ ಮಾಡಿರುವ ದಾಖಲಾತಿ ಎಂದರೆ ಸರಿಯಲ್ಲ. ಆ ಯಾವುದೇ ಹಣವನ್ನು ನಾನು ಆರೋಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಹಣವನ್ನು ಪಡೆಯದೇ ಇರುವ ಕಾರಣ ಅವರಿಂದ ಕಾನೂನುಬದ್ಧವಾಗಿ ಬರಬೇಕಾದ ಯಾವುದೇ ಹಣ ಇಲ್ಲ ಎಂದರೆ ಸರಿಯಲ್ಲ. ನಾನು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿಡಬ್ಲೂಃ 1

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.